ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಸಚಿವರು ಹೇಳತಕ್ಕಂಥ ವಿಚಾರ ನೋಡಿದರೆ ನಿಮಗೆ ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲವೆಂದು ಕಾಣುತ್ತದೆ. ವರ್ಗಾವಣೆ ಮಾಡಿದ ಮೇಲೆ ನೀವು ಆಯ್ಕೆ ಮಾಡಬೇಕೆಂದು ನಮಗೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದೀರಿ. ಆ ಸುತ್ತೋಲೆಯನ್ನು ನಾವು ನಿಮಗೆ ತೋರಿಸುತ್ತೇವೆ. ವರ್ಗಾವಣೆಯಾದ ಮೇಲೆ ದೂರದಲ್ಲಿರತಕ್ಕಂಥವರನ್ನು ಹತ್ತಿರಕ್ಕೆ ಹಾಕಬೇಕೆಂದು ಸುತೋಲೆ ಕಳುಹಿಸಿ ವರ್ಗಾವಣೆಯಾದ ಮೇಲೆ ನೀವು ಆಯ್ಕೆ ಮಾಡಬೇಕೆಂದು ಹೇಳಿದ್ದೀರಿ. ವರ್ಗಾವಣೆ ಪ್ರಕ್ರಿಯೆ ಮುಗಿಯುವುದರೊಳಗೆ ಕೋರ್ಟ್‌ನಿಂದ ಸ್ಟೇ ಬಂತು ನೀವು ಆಯ್ಕೆ ಮಾಡಲಿಲ್ಲವೆಂದು ನೀವು ನಮ್ಮ ಮೇಲೆ ಹಾಕಿದರೆ ಹೇಗೆ? ಈಗ ಇರತಕ್ಕಂಥ ಸಮಿತಿಯೇ ಮುಂದುವರಿಯಬೇಕು.

ಅಧ್ಯಕ್ಷರು: ಆ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡುತ್ತೀರೊ ಅಥವಾ ಇಲ್ಲವೊ ಎಂಬುದರ ಬಗ್ಗೆ ಮಾತ್ರ ಹೇಳಿದರೆ ಸಾಕು.

ಶ್ರೀ ವಾಟಾಳ್ ನಾಗರಜ್: ಕೇಂದ್ರ ಸರ್ಕಾರ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ನಾವು ಅಧ್ಯಕ್ಷರಾಗಬಾರದೆಂದು ಹೇಳುವುದಕ್ಕೆ ಅವರ್ಯಾರು? ಶಾಸಕರನ್ನು ಬಿಟ್ಟು ಬೇರೆಯವರನ್ನು ಉಪಾಧ್ಯಕ್ಷರನ್ನಾಗಿ ಮಾಡಿ ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಆದ್ದರಿಂದ, ನೀವು ಶಾಸಕರಿಗೆ ಇರತಕ್ಕಂಥ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಹೋಗಬೇಡಿ.

ಅಧ್ಯಕ್ಷರು: ಏನು ಮಾಡುತ್ತೀರೆಂಬುದನ್ನು ಹೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿ ಅಂತಿಮ ತೀರ್ಮಾನಕ್ಕೆ ಬರುತ್ತೇವೆ.

(ಇ) ವಿಷಯ: ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕಲುಷಿತಗೊಂಡಿರುವ ನೀರು ಸರಬರಾಜು ಆಗುತ್ತಿರುವ ಬಗ್ಗೆ

ಶ್ರೀ ಎನ್.ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಮಹತ್ವದ ಪ್ರಶ್ನೆಯನ್ನು ನಾನು ಏತಕ್ಕಾಗಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಈಗಾಗಲೇ ಗ್ರೇಟರ್ ಬೆಂಗಳೂರು ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕಂಥ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಮಲ್ಲೇಶ್ವರಂ, ಬಸವೇಶ್ವರ ನಗರ, ರಾಜಾಜಿನಗರ ಪ್ರದೇಶಗಳಿಗೆ ಕಲುಷಿತ ನೀರು

ಬರುತ್ತಿದೆ ಎಂಬ ವಿಷಯಗಳು ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ ಬೆಂಗಳೂರು ನಗರ ಇಷ್ಟೋಂದು ಬೆಳೆಯುವುದಕ್ಕೆ ಬಿಟ್ಟು ಈಗ ಜನ ಬೊಬ್ಬೆ ಹೊಡೆದರೆ ನಾವೇನು ಮಾಡುವುದಕ್ಕೆ ಆಗುತ್ತದೆಂದು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿರುವ ಶರದ್‌ಚಂದ್ರಾರವರು. ಹೇಳಿರುವ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಆದರಿಂದ, ಸರ್ಕಾರ ಮಹಾನಗರ ಪಾಲಿಕೆ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಇವತ್ತಿನ ದಿವಸ IT BT ಬರತಕ್ಕಂಥ ಈ ಪ್ರದೇಶದಲ್ಲಿ ಸರಿಯಾದ ರೀತಿಯಲ್ಲಿ ಬರುವುದಿಲ್ಲವೆಂದರೆ ಸಾಕಷ್ಟು ಜನರ ಅಭಿಪ್ರಾಯ ಬೇರೆ ಕಡೆಗೆ ಹೋಗುತ್ತದೆ. ನನ್ನ ಕಾಲದಲ್ಲಿ ಆಗಿರುವ ವಿಚಾರವನ್ನು ಸುಮ್ಮನೆ ಹೇಳುವುದಕ್ಕೆ ಹೋಗುತ್ತಿಲ್ಲ ನಾನು ಮುಖ್ಯಮಂತ್ರಿಯಾಗಿದಂತ ಸಂದರ್ಭದಲ್ಲಿ ಜಪಾನ್ ಬ್ಯಾಂಕಿನ ನೆರವಿನಿಂದ 3,384 ಕೋಟಿ ರೂಪಾಯಿ ವೆಚ್ಚ ಮಾಡಿ ಬೆಂಗಳೂರು ನಗರಕ್ಕೆ ನೀರು ಸರಬರಾಜು ಆಗಬೆಕೆಂದು ಮಾನ್ಯ ರಾಮಲಿಂಗರೆಡ್ಡಿಯವರ ಮತ ಕ್ಷೇತ್ರವಾದ ಜಯನಗರದಲ್ಲಿ ಕೆಲಸ ಪ್ರಾರಂಭ ಮಾಡಿದ್ದೆವು. ಆಗ ಮಾನ್ಯ ಗುಲಾಂನಭಿ ಆಜಾದ್‌ರವರು ಕೇಂದ್ರದ ಮಂತ್ರಿಗಳಾಗಿದ್ದರು. ಇವತ್ತು ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿನ ತೊಂದರೆ ಇದೆ ಎಂಬ ಭಾವನೆ ಎಲ್ಲಾ ಕಡೆ ಬೆಳೆಯುತ್ತಿದೆ. ಕಲುಷಿತ ನೀರನ್ನು ಮಹಾನಗರ ಪಾಲಿಕೆ ಇಲ್ಲಿನ ಜನರಿಗೆ ಕುಡಿಸುತ್ತಿದೆ. ಈ ಒಂದು ಖಾತೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇದೆ. ಆದರೆ, ಇದನ್ನು ನೋಡುವುದಕ್ಕೆ ಅವರಿಗೆ ಸಮಯವಿಲ್ಲ. ಹೂಳೆತ್ತುವ ಬಗ್ಗೆ ಮತ್ತು ಕೇಂದ್ರದಿಂದ ಬಂದಿರತಕ್ಕಂಥ ಅನುದಾನದ ಬಗ್ಗೆ ಮಾನ್ಯ ಡಿ.ಕೆ.ಶಿವಕುಮಾರ್‌ರವರು ಇವತ್ತು ಮಾತನಾಡುತ್ತಾರೆ. ನಾನು ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಈಗ ಮಾನ್ಯ ಎಂ.ಪಿ.ಪ್ರಕಾಶ್‌ರವರು ಇಲ್ಲಿರುವುದರಿಂದ ಅವರ ಗಮನಕ್ಕೆ ತರುವುದೇನೆಂದರೆ, ಎಲ್ಲೆಲ್ಲಿ ಕಲುಷಿತ ನೀರು ಬರುತ್ತಿದೆ ಎಂಬ ವಿಷಯ ನಿನ್ನೆ ದಿವಸ ಪ್ರಮುಖವಾದಂಥ ಪತ್ರಿಕೆಗಳಲ್ಲಿ ಬಂದಿದೆ. ಈ ವಿಷಯವನ್ನು ನಿನ್ನೆ ದಿವಸ ಕೇಳಬೇಕೆಂದು ಇದ್ದೆ. ಆದರೆ, ಶೂನ್ಯ ವೇಳೆಯಲ್ಲಿ ಬಹಳಷ್ಟು ವಿಷಯಕ್ಕೆ ಅವಕಾಶ ಕೊಟ್ಟಿದ್ದಿರೆಂದು ನಿನ್ನೆ ದಿವಸ ಕೇಳಲಿಲ್ಲ. ಸರ್ಕಾರ ಇದರ ಬಗ್ಗೆ ಸರಿಯಾದಂಥ ಉತ್ತರ ಕೊಡಬೇಕೆಂದು ಇವತ್ತು ಕೇಳುತ್ತಿದ್ದೇವೆ. ಉತ್ತರ ಕೊಡುವುದಕ್ಕಿಂಥ ಮುಂಚೆ ಇದನ್ನು ಹತೋಟಿಯಲ್ಲಿ ತೆಗೆದುಕೊಂಡು ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸಬೇಕು.

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ): ಮಾನ್ಯ ಅಧ್ಯಕ್ಷರೆ, ಇದು ಬಹಳ ಸೂಕ್ಷ್ಮವಾದ ವಿಚಾರ. ನಮ್ಮ ನಾಯಕರು ಈಗಾಗಲೇ ಹೇಳಿದ ಹಾಗೆ, ಬೆಂಗಳೂರಿನಲ್ಲಿ ಅರ್ಧ ಭಾಗದಲ್ಲಿರುವ ಬಿನ್ನಿಪೇಟೆಯಿಂದಿಡಿದು ನಗರದ ಬಹುತೇಕ ಎಲ್ಲಾ ಭಾಗಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಸರಬರಾಜು ಆಗುತ್ತಿದೆ. ನೆಲಮಂಗಲ, ಮಾದನಾಯ್ಕನ ಹಳ್ಳಿ, ದಾಸನಪುರ ಮತ್ತು ಇತರೇ ಪ್ರದೇಶದಲ್ಲಿರುವ ಕೈಗಾರಿಕೆಗಳಿಂದ ಬರುವ ಕಲುಷಿತವಾದಂಥ ನೀರನ್ನು ಈ ಒಂದು ಹೊಳೆಗೆ ಬಿಡುತ್ತಿದ್ದಾರೆ. ಮೊದಲಿಗೆ ಇದು ಗೊತ್ತಾಗುತ್ತಿರಲಿಲ್ಲ. ಈ ಒಂದು ಜಲಾಶಯಕ್ಕೆ ನಂದಿ ಬೆಟ್ಟ ಪ್ರದೇಶದಿಂದ ಹರಿದು ಬರತಕ್ಕಂಥ ಜೀವ ನದಿ ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಇವತ್ತಿನ ದಿವಸ ಆ ನದಿ ನೀರು ಪೂರ್ಣವಾಗಿ ಕಲುಷಿತವಾಗಿದ್ದು ಅಲ್ಲಿಂದ ಬರತಕ್ಕಂಥ ಇಡೀ ಗಲೀಜು ನೀರು ಈ ಜಲಾಶಯಕ್ಕೆ ಸೇರುತ್ತಿದೆ. ವೃಷಭಾವತಿ, ಹೆಬ್ಬಾಳ ಮತ್ತು ಚೆಳ್ಳಘಟ್ಟ ಕಾಲುವೆಗಳಲ್ಲಿ ಬೆಂಗಳೂರು ಸುತ್ತಾ ಇರುವ ಪ್ರದೇಶದ ಗಲೀಜು ನೀರು ಹರಿದು ಹೋಗುತ್ತಿದೆ. ಇದೇ ರೀತಿಯಾದ ನೀರು ಇವತ್ತಿನ ದಿವಸ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಬಂದು ಸೇರುತ್ತಿದೆ. ದನಕರುಗಳು ಆ ನೀರನ್ನು ಕುಡಿದರೂ ಸಹ ಸತ್ತು ಹೋಗುತ್ತವೆ. ಅಂತಹ ನೀರು ಇವತ್ತು ತಿಪ್ಪಗೊಂಡನಹಳ್ಳಿ ಕೆರೆಗೆ ಬಂದಾಗ, ಅಲ್ಲಿರುವಂತಹ ನೀರನ್ನು treatment, ಕಾವೇರಿ ನೀರಿಗೆ ಯಾವ ರೀತಿ treatment ಮಾಡುತ್ತಾರೆ, ಅಷ್ಟು ಮಾತ್ರ ಮಾಡಿ ಅದನ್ನು ಮತ್ತೆ ಬೆಂಗಳೂರಿಗೆ ನೀರು ಸರಬರಾಜು ಮಾಡುತ್ತಿದ್ದಾರೆ. ಇವತ್ತು ಅದರಿಂದಾಗಿ ಗ್ಯಾಸ್ಟ್ರಿಕ್ ಕಾಯಿಲೆ, ಮತ್ತೊಂದು ಆಗುತ್ತಿದೆ.

ಅಧ್ಯಕ್ಷರು: ಅಯಿತು ಬಿಡಿ. ಶೂನ್ಯ ವೇಳೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ,

ಶ್ರೀ ವಿ.ಸೋಮಣ್ಣ: ಇದು ಭಾರಿ ಸೂಕ್ಷ್ಮವಾದಂತಹ ವಿಚಾರವಾಗಿದೆ. ಯಾವ ಉದ್ದೇಶದಿಂದ ಇಲ್ಲಿ ಕಾರ್ಖಾನೆಗಳು ಬರಬಾರದು ಎಂದು ಮಾಡಿದ್ದರೋ. ಆ ನದಿ ಪಾತ್ರದಲ್ಲಿ ಬರಬಾರದು ಎಂದು ಆಗಿತ್ತೋ, ಸುಪ್ರೀಂಕೋರ್ಟಿನ ಆದೇಶವನ್ನು ಕಂಪ್ಲೀಟಾಗಿ ಧಿಕ್ಕರಿಸಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುವುದೇನೆಂದರೆ, ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಈ ನದಿಗೆ ಬರುವಂತಹ ಗಲೀಜು ನೀರನ್ನು ತಪ್ಪಿಸುವುದಕ್ಕೆ ಏನು, ಸುಪ್ರೀಂಕೋರ್ಟಿನ ಆದೇಶವಿದೆ ಅದರ ಬಗ್ಗೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಅಧ್ಯಕ್ಷರು: ಎಲ್ಲರೂ ಒಂದು ನಿಮಿಷ ಮಾತನಾಡಬೇಕು.

ಶ್ರೀ ಎನ್.ಎಲ್.ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ನಾನು ಒಂದು ಮನವಿಯನ್ನು ತಮ್ಮಲ್ಲಿ ಮಾಡಿಕೊಳ್ಳುತ್ತೇನೆ. ನಾವು ತಿಪ್ಪಗೊಂಡನಹಳ್ಳಿ ಕೆರೆಯ ನೀರನ್ನು ಕುಡಿಯುವವರು, ದಯವಿಟ್ಟು ಅಲ್ಲಿ ವಿಷದ ನೀರು ಬರುತ್ತಿರುವುದನ್ನು ನಿಲ್ಲಿಸಬೇಕು. ಅಲ್ಲಿ ಸುತ್ತಮುತ್ತ ಬಡಾವಣೆಗಳಲ್ಲಿ ಬರುತ್ತಿರುವಂತಹ ಕಾರ್ಖಾನೆಗಳನ್ನು ನಿಲ್ಲಿಸಬೇಕು. ಇದರಿಂದ ಬಹಳ ಅಪಾಯವಾಗಿದೆ. ಬೆಂಗಳೂರಿಗೆ ನೀರನ್ನು ಕೊಡುತ್ತಿರುವುದು ತಿಪ್ಪಗೊಂಡನಹಳ್ಳಿ ಕೆರೆಯಿಂದ. ಇವತ್ತು ಅಲ್ಲಿ ಸುತ್ತಮುತ್ತ ಇರುವಂತಹ ಕಾರ್ಖಾನೆಗಳಿಂದ ಬರುತ್ತಿರುವ ನೀರನ್ನು ಕುಡಿಯುತ್ತಿದ್ದೇವೆ. ರಾಜಾಜಿನಗರ, ಮಲ್ಲೇಶ್ವರ, ಗಾಂಧಿನಗರ ಇಲ್ಲಿ ಇರುವವರ ಸ್ಥಿತಿ ಏನಾಗಬಹುದು. ಮುಂದೆ ಆಗುವಂತಹ ಅನಾಹುತಗಳಿಗೆ ಬಹುಶಃ ಈ ಸರ್ಕಾರ ಹೊಣೆಯಾಗುತ್ತದೆ. ಅಲ್ಲಿ ಬೆರಕೆ ಆಗುತ್ತಿರುವುದು, ಅದು ಸೀಸ ಇರಬಹುದು, ಕ್ರೋಮಿಯಂ ಇರಬಹುದು, ನಾವು ಅಪಾಯದ ಅಂಚಿನಲ್ಲಿದ್ದೇವೆ. ಕ್ಯಾಚ್‌ಮೆಂಟ್ ನೀರನ್ನು ಸಹ ರಾಜಕಾಲುವೆಗಳನ್ನು ಬ್ಲಾಕ್ ಮಾಡಿದ್ದಾರೆ. ಈ ವಿಷಾನಲದ ನೀರನ್ನು ಸಹ ಬಿಡುತ್ತಿದ್ದಾರೆ. ನಾಳೆ ದಿವಸ ನಮ್ಮ ಸ್ಥಿತಿ ಏನಾಗಭೆಕು. ದಯವಿಟ್ಟು ಸರ್ಕಾರ ತುರ್ತಾಗಿ ಗಮನವನ್ನು ಹರಿಸಬೇಕೆಂದು ಒತ್ತಾಯವನ್ನು ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೆ ತಾವು ಉತ್ತರವನ್ನು ಕೊಡುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ನಗರಾಭಿವೃದ್ಧಿ ಕಾರ್ಯದರ್ಶಿಗಳನ್ನು ಕರೆಸಿ ಅವರ ಜೊತೆಗೆ ಮಾತನಾಡಿದ್ದೇನೆ. ಆ ಎಲ್ಲಾ ವಿವರಗಳನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಇದಕ್ಕೆ ಸಮಯಾವಕಾಶ ಬೇಕಾಗುತ್ತದೆ. ಪ್ರಾಯಶಃ 12.30 ಅಥವಾ 1.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಆ ಸಮಯದಲ್ಲಿ ಆದರೂ ಉತ್ತರವನ್ನು ಕೊಡಿಸುತ್ತೇನೆ. ಇಲ್ಲದೇ ಇದ್ದರೆ ನಾನು ಮಾಹಿತಿಯನ್ನು ತರಿಸಿಕೊಂಡು ಖಂಡಿತವಾಗಿಯೂ ಉತ್ತರವನ್ನು ಕೊಡಿಸುತ್ತೇನೆ.

(ಈ) ವಿಷಯ: ಮುರುಡಿ ಗ್ರಾಮದ ಚಿಕ್ಕನೀರಾವರಿ ಯೋಜನೆಗೆ ವಶಪಡಿಸಿಕೊಂಡ ಜಮೀನಿಗೆ ಪರಿಹಾರ ಧನವನ್ನು ಕೊಡುವ ಬಗ್ಗೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮುರುಡಿ ಗ್ರಾಮದಲ್ಲಿ ಒಂದು ಚಿಕ್ಕ ನೀರಾವರಿ ಹೊಸ ಕೆರೆಯನ್ನು ಮಾಡಿದ್ದಾರೆ. ಅಲ್ಲಿಯ ರೈತರು